	ನಂಜನಗೂಡು ವಿಧಾನಸಭಾ ಕ್ಷೇತ್ರ		
9	ನಂಜನಗೂಡಿನಲ್ಲಿ ಕಿರಿಯ ಕಾಲೇಜಿಗೆ 4 ಹೆಚ್ಚುವರಿ ಕೊಠಡಿಗಳ ನಿರ್ಮಾಣ	4202–ಪ್ರೌಢ ಶಿಕ್ಷಣ	6 00
			373 31

449 (848) **ಶ್ರೀ ಸುನಿತ/ ವೀರಪ್ಪಗೌಡ ಜೆ (ಬನ್ನೂರು)** ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೂರು ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರದಿಂದ ಯಾವಾಗ ಅನುಮೋದನೆ ನೀಡಲಾಯಿತು,

ಆ) ಈ ಕಾಮಗಾರಿಗೆ ನಿಗಧಿಯಾದ ಹಾಗೂ ಬಿಡುಗಡೆ ಯಾವ ಅನುದಾನವೆಷ್ಟು,

ಇ) ಟೆಂಡರ್ ಕರೆದಾಗ ಈ ಕಾಮಗಾರಿ ಪೂರ್ಣಗೊಳಿಸಲು ನಿಗಧಿಗೊಳಿಸಲಾದ ಅವಧಿ ಎಷ್ಟು,

ಈ) ಈ ಕಾಮಗಾರಿಯು ಅರ್ಧಕ್ಕೆ ನಿಂತಿರುವುದನ್ನು ಪೂರ್ಣಗೊಳಿಸದೆ ಇರುವುದಕ್ಕೆ ಕಾರಣವೇನು? ಯಾವಾಗ ಪೂರ್ಣಗೊಳಿಸಲಾಗುವುದು,

ಉ) ಈ ಕಾಮಗಾರಿಯು ನಿಂತಿರುವುದರಿಂದ ಚರಂಡಿ ನೀರು ಮೈಸೂರು–ಮಳವಳ್ಳಿ ಮುಖ್ಯ ರಸೆಯ ಪಕ್ಕದಲ್ಲಿ ನಿಂತು ರಸ್ತೆಯಲ್ಲಿ ಪ್ರಯಾಣಿಸುವ ಸಾರ್ವಜನಿಕರಿಗೆ ಅತ್ಯಂತ ಕೆಟ್ಟ ದುರ್ವಾಸನೆ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಊ) ಈ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ದಿನಾಂಕ 1 12 2000 ರಂದು ಆಡಳಿತಾತ್ಮಕ ಅನುಮೋದನೆ ನೀಡಿದೆ

ಆ) ಸದರಿ ಯೋಜನೆಗೆ ನಿಗಧಿಯಾದ ಸಾಲ ಮತ್ತು ಸ್ಥಳೀಯ ಸಂಸ್ಥೆಯ ವಂತಿಕೆ ಕೆಳಕಂಡಂತಿದೆ, ಸರ್ಕಾರದ ಸಾಲ– ರೂ 156 98ಲಕ್ಷಗಳು

ಆರ್ಥಿಕ ಸಂಸ್ಥೆಗಳಿಂದ ಸಾಲ–ರೂ 261 63 ಲಕ್ಷಗಳು ಸ್ಥಳೀಯ ಸಂಸ್ಥೆಯ ವಂತಿಕೆ–ರೂ 104 65 ಲಕ್ಷಗಳು ಈವರೆಗೆ ರೂ 522 27 ಲಕ್ಷಗಳು ಬಿಡುಗಡೆಯಾಗಿದೆ

ಇ) ಆಂತರಿಕ ಕೊಳವೆ ಮಾರ್ಗಗಳು, ಔಟ್ ಫಾಲ್ ಸೀವರ್, ವೆಟ್ ವೆಲ್ ನಿರ್ಮಾಣ ಮುಂತಾದ ಕಾಮಗಾರಿಗಳಿಗೆ 18 ತಿಂಗಳ ಕಾಲಾವಕಾಶ ನೀಡಲಾಗಿದೆ

ಕೊಳಚೆ ನೀರು ಶುದ್ಧೀಕರಣ ಘಟಕ ನಿರ್ಮಿಸುವ ಕಾಮಗಾರಿಗೆ 8 ತಿಂಗಳ ಕಾಲಾವಕಾಶ ನೀಡಲಾಗಿದೆ

ಈ) ಕಾಮಗಾರಿಗಳಿಗೆ ಒಟ್ಟು 12 ಎಕರೆ 11 ಗುಂಟೆ ಜಮೀನು ಬನ್ನೂರು ಪುರಸಭೆಯವರು ಮಂಡಳಿಗೆ 4 ಗುಂಟೆ ಜಮೀನು ಮಾತ್ರ ಹಸ್ತಾಂತರಿಸಿರುತ್ತಾರೆ ಈ ಹಸ್ತಾಂತರಿಸಿದ ಜಾಗದಲ್ಲಿ ಒಂದು ಶುದ್ಧೀಕರಣ ಘಟಕವನ್ನು ನಿರ್ಮಾಣ ಮಾಡಲಾಗಿದೆ ಇನ್ನುಳಿದ 6 ಎಕರೆ 7 ಗುಂಟೆ ಜಮೀನನ್ನು ಹಸ್ತಾಂತರಿಸಿದ ಕೂಡಲೇ ಉಳಿದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು

ಉ) ಮಳೆಗಾಲದಲ್ಲಿ ಕೊಳಚೆ ನೀರು ಮತ್ತು ಮಳೆ ನೀರು ಸೇರಿ ಉಕ್ಕಿ ಹರಿದು ರಸ್ತೆಗೆ ಚರಂಡಿ ನೀರು ಬಂದಿರುತ್ತದೆ ಇದನ್ನು ಸರಿಪಡಿಸಲು ಪೂರ್ಣ ಕ್ರಮವನ್ನು ಬನ್ನೂರು ಪಟ್ಟಣ ಪಂಚಾಯತ್ ತೆಗೆದುಕೊಳ್ಳುತ್ತಿದೆ

ಊ) ಉದ್ಭವಿಸುವುದಿಲ್ಲ

450 (506) **ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು)** : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರ ಮತಕ್ಷೇತ್ರದ ಗ್ರಾಮೀಣ ರಸ್ತೆಯಾದ ನೇಗಿಹಾಳ–ಬೇವಿನಕೊಪ್ಪ ರಸ್ತೆಯನ್ನು ಜಿಲ್ಲೆ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ, ನೀರಾವರಿ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ ಯಾವಾಗ ಹಸ್ತಾಂತರಿಸಿಕೊಳ್ಳಲಾಗುವುದು

ಇ) ನೇಗಿಹಾಳ–ಬೇವಿನಕೊಪ್ಪ ರಸ್ತೆಯ ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?